**Spl.C.5092/2021**
**PW.6 CW.6 Kaverappa**

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5092/2021**

**ಪ್ರಾಸಾ -- 6**

**ಚಾಸಾ – 6**

ಸಾಕ್ಷಿಯ ಹೆಸರು – ಕಾವೇರಪ್ಪ
ಗಂಡನ ಹೆಸರು – ಲೇಟ್ ಮುತ್ತಣ್ಣ
ವಯಸ್ಸು – 54 ವರ್ಷ
ವೃತ್ತಿ – ರೈತ
ವಿಳಾಸ – ನಾಲ್ಕೇರಿ

ದಿಃ 06.01.2026 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ಒಂದನೇ ಆರೋಪಿಯು ನಮ್ಮ ಮನೆಯ ಪಕ್ಕದವರು. ಉಳಿದ ಆರೋಪಿತರು ನಮ್ಮ ಊರಿನವರು. ಪ್ರಾಸಾ 1 ರಿಂದ 4 ರವರು ಊರಿನ ಪಕ್ಕದ ಕಾಲೋನಿಯವರು. ಸದರಿಯವರು ಯರವ ಜಾತಿಗೆ ಸೇರಿದ್ದಾರೆ. ಒಂದನೇ ಆರೋಪಿ ಕೊಡವ, ಎರಡನೇ ಆರೋಪಿ ಲಿಂಗಾಯತ, ಉಳಿದ ಆರೋಪಿತರು ಕೊಡವ ಹಾಗೂ ಮಡಿವಾಳ ಶೆಟ್ಟರ ಜಾತಿಗೆ ಸೇರಿದ್ದಾರೆ.

2. ನಾಲ್ಕು ವರ್ಷಗಳ ಹಿಂದೆ ಸಂಜೆ ನಾಲ್ಕು ಗಂಟೆಯ ಸಮಯದಲ್ಲಿ ನಾನು ಮಕ್ಕಳನ್ನು ಟ್ಯೂಷನ್ ನಿಂದ ಕರೆದುಕೊಂಡು ಬರಲು ಕುಮಟೂರಿಗೆ ಹೋಗಿ ಬರುತ್ತಿದ್ದೆ, ನಾಲ್ಕೇರಿಯ ಕೂಡು ರಸ್ತೆಯ ಬಳಿ ಸುಮಾರು 50-60 ಜನ ಜಗಳ ಮಾಡುತ್ತಿದ್ದರು. ನಾನು ಜಗಳ ಏಕೆ ಮಾಡುತ್ತೀರಿ ಎಂದು ಜಗಳ ಬಿಡಿಸಿ, ನಾನು ಹೋದೆನು. ಆ ವ್ಯಕ್ತಿಗಳು ಯಾರು ಅಂಥ

ಹೇಳಲಾಗುವುದಿಲ್ಲ. ಆರೋಪಿತರು ಸಹ ಆ ಗುಂಪಿನಲ್ಲಿ ಇದ್ದರು. ಯಾರು ಯಾರಿಗೆ ಏನು ಮಾಡಿದ್ದರು ಎಂದು ಗೊತ್ತಿಲ್ಲ. ನನ್ನ ಮುಂದೆ ಆರೋಪಿತರು ಪ್ರಾಸಾ 1 ರಿಂದ 4 ರವರಿಗೆ ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

3. ನಾನು ಪೊನ್ನಂಪೇಟೆಯ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ. ಸದರಿ 164 ಸಿ ಆರ್ ಪಿ ಸಿ ಹೇಳಿಕೆಯನ್ನು ನೋಡುತ್ತಿದ್ದು, **ನಿಪಿ 10, 10(ಎ)** ನನ್ನ ರುಜು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

4. ದಿನಾಂಕ 13.07.2021 ರಂದು ಸಂಜೆ 4.00 ಗಂಟೆಗೆ ನಾನು ಮಕ್ಕಳನ್ನು ಟ್ಯೂಷನ್ ನಿಂದ ಕರೆದುಕೊಂಡು ಬರುತ್ತಿದ್ದೇನೆ ಎಂದರೆ ಸರಿ. ಒಂದನೇ ಆರೋಪಿಯ ಅಂಗಡಿಯ ಹತ್ತಿರ ಇರುವ ರಸ್ತೆಯ ಬಳಿ ಪ್ರಾಸಾ 1 ಮತ್ತು 2 ರವರಿಗೆ ಆರೋಪಿತರು ಕೈಗಳಿಂದ ಹಲ್ಲೆ ಮಾಡುತ್ತಿದದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪ್ರಾಸಾ 3 ಭೋಜಿ ಹಾಗೂ ಪ್ರಾಸಾ 4 ಗೌರಿರವರು ಸ್ಥಳಕ್ಕೆ ಬಂದಿದ್ದು, ಅವರುಗಳಿಗೆ ಕಾರ್ಯಪ್ಪ, ನರೇಶ್ ಹಾಗೂ ಭರತ್ ರವರು ಬಂದು ಅವರನ್ನು ಹಿಡಿದು ಎಳೆದು ಕೈಗಳಿಂದ ಹೊಡೆದು, ಕಾಲಿನಿಂದ ಒದ್ದಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು **ನಿಪಿ 11**

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ ಎಸ್ ಪಿ ಆರೋಪಿ ಪರ ವಕೀಲರಿಂದ ಇಲ್ಲ**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಮರು ವಿಚಾರಣೆಃ ಇಲ್ಲ**

ಓಹೇಕೇ ಸರಿ ಇದೆ

Sd/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)